## ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.325/2021

ಸಾಕ್ಷಿದಾರರ ಹೇಳಿಕೆಃ

**ಹೆಸರು** : ಶ್ರೀನಿವಾಸ ಟಿ ಎಲ್ ಚಾಸಾಃ **4** ಫ್ರಾಸಾಃ **3**

**ತಂದೆಯ ಹೆಸರು** : ಲಕ್ಷ್ಮಪ್ಪ

**ವಯಸ್ಸು** : **40** ವರ್ಷ

**ವೃತ್ತಿ** : ಶಿಕ್ಷಕರು

**ವಾಸಸ್ಥಳ** : ಮಲೇಕುಂಬಳೂರು

ದಿನಾಂಕಃ **06-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-

ಆರೋಪಿ ಗೊತ್ತು. ಚಾಸಾ-1 ರಿಂದ 3, 5 ರಿಂದ 7 ಗೊತ್ತು. ಈಗ್ಗೆ 5 ವರ್ಷಗಳ ಹಿಂದೆ ನಾನು ಮತ್ತು ಚಾಸಾ-1 ರವರು ನನ್ನ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ಆದರೆ  ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು  ಎಂಬ ವಿಚಾರ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಈಗೇ ಸುಮಾರು 5 ವರ್ಷಗಳ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು :- ಮಾನ್ಯ ಸ.ಸ.ಅ. ರವರಿಂದ:-</u>

ದಿಃ 29-12-2020 ರಂದು ಮಧ್ಯಾಹ್ನ 02-30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-1 ರವರು ನನಗೆ ಸೇರಿದ ಮೋಟಾರ್ ಸೈಕಲ್ ನಂ.ಕೆಎ-17/ಹೆಚ್ ಬಿ-9641 ಮೋಟಾರ್ ಸೈಕಲ್ ನಲ್ಲಿ ಕುಂದೂರು ಬಸವಪಟ್ಟಣ ರಸ್ತೆಯಲ್ಲಿ ಹೋಗುತ್ತಿದ್ದಾಗ ಆರೋಪಿಯು ಕೆಎ-17/ಡಿ-6320 ಗೂಡ್ಸ್ ಆಟೋವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹಿಂದಿನಿಂದ ನಮ್ಮ ಬೈಕ್ ಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-1 ರವರಿಗೆ ಮಂಡಿಯ ಹತ್ತಿರ ತೀವ್ರ ಸ್ವರೂಪದ ಮತ್ತು ನನಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ ಎಂದು ಮತ್ತು ಚಾಸಾ-5 ಮತ್ತು 6 ರವರು ಬಂದು ನಮ್ಮನ್ನು ಉಪಚರಿಸಿರುತ್ತಾರೆ ಎಂದು ಮತ್ತು ನಾನು ಮತ್ತು ಚಾಸಾ-5 ರವರು ಚಾಸಾ-1 ರವರನ್ನು ಕುಂದೂರು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ದಾವಣಗೆರೆ ಸುಚೇತನ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಮತ್ತು ನನಗೆ ಸಣ್ಣ ಪುಟ್ಟ ಗಾಯಗಳಾಗಿದ್ದರಿಂದ ನಾನು ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಎಂದು ಆರೋಪಿಯ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಮತ್ತು ಆರೋಪಿಯನ್ನು ಪನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರಿಗೆ ನಿಪಿ-14 ರಂತೆ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆ ಆ ಕಾರಣದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.